ಹಿಂದೆ ಭೈರಾಪುರ ಮತ್ತು ತಗಡೂರುಗಳಲ್ಲಿ ಗಣಿಗಳಲ್ಲಿ ಸರಾಸರಿ 100 ರಿಂದ 150 ಸ್ಥಳೀಯ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದರು, ಅವರಲ್ಲಿ ಕೆಲವರನ್ನು ಸಂಸ್ಥೆಯ ಖಾಯಂ ನೌಕರರಾಗಿ ನೇಮಿಸಿಕೊಳ್ಳಲಾಗಿದ್ದು, ಪ್ರಸ್ತುತ ತಗಡೂರು ಗಣಿಯಲ್ಲಿ 70, ಭೈರಾಪುರ ಗಣಿಯಲ್ಲಿ 34 ಸೇರಿ ಒಟ್ಟು 104 ಸ್ಥಳೀಯ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ.

ಈ) ಈ ಎಲ್ಲಾ ಗಣಿಗಳಲ್ಲಿ ಗಣಿಗಾರಿಕೆಯನ್ನು ಪುನರ್ ಪ್ರಾರಂಭಿಸುವುದು ಸರ್ಕಾರದ ನಿಲುವಾಗಿದೆ. ಆದರೆ, ಮೇಲೆ ವಿವರಿಸಿರುವಂತೆ ಶಾಸನಬದ್ಧ ದಾಖಲೆಗಳ ನವೀಕರಣ ಬಾಕಿ ಇರುವುದರಿಂದ ಮತ್ತು ಗಣಿ ಸುರಕ್ಷ ನಿರ್ದೇಶನಾಲಯ (DGMS) ವತಿಯಿಂದ ಗಣಿಗಾರಿಕೆ ಪದ್ಧತಿ ಬದಲಾವಣೆಗೆ ಅವಶ್ಯ ಅನುಮತಿ ಪಡೆದ ನಂತರ ಗಣಿಗಾರಿಕೆಯನ್ನು ಪುನರ್ ಪ್ರಾರಂಭಿಸಲಾಗುವುದು.

ಟ್ರಾಫಿಕ್ ಪೊಲೀಸ್ ಠಾಣೆ ತೆರೆಯುವುದು

249(2929); ಶ್ರೀ ಡಾ॥ ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ನೆಲಮಂಗಲ ಪಟ್ಟಣಕ್ಕೆ ಹೊಂದಿಕೊಂಡಂತೆ ಪ್ರತ್ಯೇಕ ಸಂಚಾರಿ ಪೊಲೀಸ್ ಠಾಣೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಾಷ್ಟ್ರೀಯ ಹೆದ್ದಾರಿ 4ಕ್ಕೆ ಹೊಂದಿಕೊಂಡಂತೆ ಸಂಚಾರಿ ವಾಹನಗಳ ದಟ್ಟಣೆ ಬಹಳ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಟ್ರಾಫಿಕ್ ಪೊಲೀಸ್ ಠಾಣೆ ತೆರೆಯಲು ಇರಬೇಕಾದ ನಿಯಮಗಳು ಯಾವುವು (ಮಾಹಿತಿ ನೀಡುವುದು)?

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು)

ಅ) ಹೌದು.

ಆ) ಹೌದು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲದಲ್ಲಿ ಸಂಚಾರಿ ಪೊಲೀಸ್ ಠಾಣೆ ತೆರೆಯುವ ಕುರಿತಂತೆ ಪ್ರತಿವರ್ಷ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದ ಲಭ್ಯತೆಗನುಗುಣವಾಗಿ ಹಾಗೂ ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳಲಾಗುವುದು.

ಇ) ಕಾನೂನು ಮತ್ತು ಸುವ್ಯವಸ್ಥೆ ಪೊಲೀಸ್ ಠಾಣೆಗಳನ್ನು ತೆರೆಯಲು ಪ್ರಸ್ತಾವನೆಯನ್ನು ಸಲ್ಲಿಸುವಾಗ 2ನೇ ರಾಷ್ಟ್ರೀಯ ಪೊಲೀಸ್ ಆಯೋಗದ ಶಿಫಾರಸ್ಸುಗಳನ್ನು ಪರಿಗಣಿಸಲಾಗುತ್ತಿದೆ. ಸಂಚಾರ ಪೊಲೀಸ್ ಠಾಣೆಗಳನ್ನು ತೆರೆಯಲು ರಾಷ್ಟ್ರೀಯ ಪೊಲೀಸ್ ಆಯೋಗವು ಯಾವುದೇ ಮಾನದಂಡವನ್ನು ನಿಗದಿಪಡಿಸಿಲ್ಲವಾದರೂ, ವರದಿಯಾದ ಅಪಘಾತ ಪ್ರಕರಣಗಳು, ಸಂಚಾರ ದಟ್ಟಣೆ, ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳು, ಜನವಸತಿ, ಸಂಚಾರ ಪಾಯಿಂಟ್‌ಗಳ ಆಧಾರದ ಮೇಲೆ ಸಂಚಾರ ಪೊಲೀಸ್ ಠಾಣೆಗಳನ್ನು ತೆರೆಯಲು ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ನೂತನ ಕೈಗಾರಿಕಾ ನೀತಿ ಜಾರಿಯಾಗುತ್ತಿರುವುದು

250(3689); ಶ್ರೀ ಪ್ರಿಯಾಂಕ್ ಎಂ. ಖರ್ಗೆ (ಚಿತ್ತಾಪುರ)

ಅ) ನೂತನ ಕೈಗಾರಿಕಾ ನೀತಿ ಜಾರಿಗೆ ತರುವ ಆಲೋಚನೆ ಸರ್ಕಾರಕ್ಕೆ ಇದೆಯೇ;

ಹಾಗಿದ್ದಲ್ಲಿ ಯಾವಾಗ ಜಾರಿಗೆ ತರಲಾಗುವುದು;

ಆ) ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಬಂಡವಾಳ ಹೂಡಿಕೆ ಮಾಡುವವರಿಗೆ ಈ ನೂತನ ಕೈಗಾರಿಕಾ ನೀತಿಯಲ್ಲಿ ವಿಶೇಷ ಅವಕಾಶ ಹಾಗೂ ಅನುಕೂಲಗಳಿವೆಯೇ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಆಲೋಚನೆ ಇದೆ.

ನೂತನ ಕೈಗಾರಿಕಾ ನೀತಿ 2014–19ನ್ನು, 2014ರ ಆಗಸ್ಟ್ ತಿಂಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗಿದೆ.

ಆ) ಹೌದು.

ನಿವೇಶನಗಳನ್ನು ಹಂಚಿಕೆ ಮಾಡದಿರುವುದು

251(3188); ಶ್ರೀ ನಿಂಗಯ್ಯ ಬಿ.ಬಿ. (ಮೂಡಿಗೆರೆ)

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಬಿಡದಿ ಕೈಗಾರಿಕಾ ಪ್ರದೇಶದ 2ನೇ ಫೇಸ್, 2ನೇ ಸೆಕ್ಟಾರ್‌ನಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಸರ್ಕಾರ ನಿಗಧಿಪಡಿಸಿದ ನಿವೇಶನಗಳು ಮತ್ತು ನಿಗಧಿಪಡಿಸಿದ ವಿಸ್ತೀರ್ಣ ಈ ಜನಾಂಗದವರಿಗೆ ಹಂಚಿಕೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಆ ಜನಾಂಗದವರಿಗೆ ಅನ್ಯಾಯವೆಸಗಿದ ಅಧಿಕಾರಿ / ನೌಕರರ ವಿರುದ್ಧ ತನಿಖೆಗೆ ಮನವಿ ಬಂದಿದೆಯೇ;

ಇ) ಹಾಗಿದ್ದಲ್ಲಿ, ತಪ್ಪಿತಸ್ಥರ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಯವರು)

ಅ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ಕುರಿತು ಶ್ರೀ ಆರ್. ದೇವರಾಜ್ ಎಂಬುವವರು ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಮುಂದೆ ದೂರನ್ನು ದಿನಾಂಕ: 07.03.2013 ರಂದು ಸಲ್ಲಿಸಿದ್ದು, ಆಯೋಗವು ಪ್ರಕರಣ ಸಂಖ್ಯೆ: 47/2011ನ್ನು ದಾಖಲಿಸಿಕೊಂಡಿತ್ತು.